ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸನ್ಯಾಸಿಗಳು ಸೇರಿದರೆ ಹರಿಭಜನೆ. ಮಂತ್ರಿಗಳು ಸೇರಿದರೆ?*



ಹರಿದುಹಂಚಿಕೊಳ್ಳುವಿಕೆ, ವಿಭಜನೆ.

ಡಾ.ಕೆ.ಕೆ. ಜಯಚಂದ್ರಗುಪ್ತ, ಹಾಸನ

*ವಕೀಲರಿಗೂ, ವೈದ್ಯರಿಗೂ ವ್ಯತ್ಯಾಸವೇನು?*

ಒಂದೇ ಅಕ್ಷರ ವ್ಯತ್ಯಾಸ – ಕಾಯಿದೆಗೊಬ್ಬ, ಕಾಯಿಲೆಗೊಬ್ಬ!

ಎಂ.ಎನ್. ಸೋಮಶೇಖರ್, ಮೈಸೂರು

*ಆಂಜನೇಯನಿಗೆ ಬಾಲವಿಲ್ಲದಿದ್ದರೆ ಲಂಕಾದಹನ ಹೇಗಾಗುತ್ತಿತ್ತು?*

ಸೌದಿ ಅರೇಬಿಯಾಕ್ಕೆ ಹಾರಿ, ಪೆಟ್ರೋಲ್ ಬಾವಿಗಳನ್ನೇ ತಂದು ಸುರಿದು, ಇಬ್ಬರು ರಕ್ಕಸರ ತಲೆ ಡಿಕ್ಕಿ ಹೊಡೆಸಿ ಕಿಡಿ ಬರಿಸಿ ಸುಡುತ್ತಿದ್ದ!

ಎಸ್.ಜಿ. ಕರನಂದಿ, ಹುನಗುಂದ

*ಬೋಳು ತಲೆಯವರ ಬುದ್ಧಿಗೂ, ಕೂದಲಿರುವ ತಲೆಯವರ ಬುದ್ಧಿಗೂ ಏನು ವ್ಯತ್ಯಾಸ?*



ಲ್ಯಾಮಿನೇಟ್ ಮಾಡಿಸಿದರೆ ಪುಸ್ತಕದ ವಿಷಯ ಬೇರೆಯಾದೀತೇ? ಕೂದಲು ಮಸ್ತಕದ ಲ್ಯಾಮಿನೇಷನ್ ಅಷ್ಟೆ.

ಮಲ್ಲನಗೌಡ. ಗಂ. ಪಾಟೀಲ, ರಾಮದುರ್ಗ

*ಮರವು ತನ್ನನ್ನು ಕಡಿಯಲು ಬಂದವರಿಗೂ ಕೂಡಾ ನೆರಳು ನೀಡುತ್ತದೆಯಲ್ಲಾ...?*

ಪಾಪ! ಮರಕ್ಕೆ ತಿಳಿದಿರುವುದು ಎರಡೇ ಅಂತೆ – ಮ– ಮನ್ನಿಸುವುದು, ರ– ರಕ್ಷಿಸುವುದು.

ಎಲೆಮುದ್ದೇನಹಳ್ಳಿ ಸೋಮಶೇಖರ್, ಅಂಕನಹಳ್ಳಿ

*ಸ್ತ್ರೀಯರು ಮೇಕಪ್ಪಿಗೆ ಖರ್ಚು ಮಾಡುವಷ್ಟು ಹಣವನ್ನು ಮನೆಯ ಸಂಸಾರಕ್ಕೆ ಏಕೆ ಖರ್ಚುಮಾಡುವುದಿಲ್ಲ?*

ಸಂಸಾರದ ಖರ್ಚನ್ನು ಗಂಡ ಹೇಗೋ ಮೇಕಪ್ ಮಾಡ್ತಾನೆ ಅನ್ನೋ ಧೈರ್ಯ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಪಾರ್ಟಿಗಳಲ್ಲಿ ಎಷ್ಟು ಬಗೆಯ ಪಾರ್ಟಿಗಳಿವೆ?*

ವೆಜ್‌ನವರಿಗೆ ಒಂದು, ನಾನ್‌ವೆಜ್‌ನವರಿಗೆ ಎರಡು– ಟೀ ಪಾರ್ಟಿ, ಗುಂಡ್ ಪಾರ್ಟಿ, ತುಂಡ್ ಪಾರ್ಟಿ.

ತೊರಗಲ್ಲ ಉಮೇಶ, ರಾಮದುರ್ಗ

*ನನ್ನ ಗೆಳತಿ ನಾಳೆ ಭೇಟಿ ಆಗೋಣ ಎನ್ನುತ್ತಾಳೆ. ಕೈ ಕೊಡುವ ಲಕ್ಷಣವೆ?*

ಒಂದು ದಿನದ ಮಟ್ಟಿಗೂ ಅವಳ ಮಾತನ್ನು ನಂಬದ ನಿಮಗೆ ಕೈ ಕೊಡುವುದೇ ವಾಸಿ!

ದೇವಕಿಸುತ, ಬೆಂಗಳೂರು

*'ಪಿತ್ತ ನೆತ್ತಿಗೇರಿಸಬೇಡ' ಅನ್ನುವ ಮಾತಿದೆ. ನಿಮಗೆ ಇದರ ಅನುಭವ ಆಗಿರಬಹುದೆ?*

ಇಲ್ಲ; ಕಪಿತ್ಥ ಸೇವಿಸುವವರಿಗೆ ಪಿತ್ತ ಏರುವುದಿಲ್ಲ.

ನವಿರವಿ, ಬಾಳೆಹೊನ್ನೂರು

*ಕುದುರೆಯನ್ನು ಕಂಡರೆ ಕಾಲುನೋವು, ಕತ್ತೆಯನ್ನು ಕಂಡರೆ?*

(ಅದು ಅರಚಿದ ನಂತರ) ಕಿವಿನೋವು!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ಟಿವಿ ಮಾಧ್ಯಮದವರು ಕೆಟ್ಟದ್ದನ್ನೇ ಹೆಚ್ಚಾಗಿ ತೋರಿಸಲು ಕಾರಣ?*

ಟಿ ಫಾರ್ ತರಳೆ, ಆರ್ ಫಾರ್ ರೇಪ್, ಪಿ ಫಾರ್ ಪೋಕರಿ ತೋರಿಸಿದರೆ ಟಿಆರ್‌ಪಿ ಏರುವುದರಿಂದ!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ಪ್ರೇಯಸಿಯೊಬ್ಬಳು ನನಗೆ 'ನಿಮ್ಮ ಮೇಲೆ ನನ್ನ ಪ್ರೀತಿ ಉಕ್ಕಿ ಹರಿಯುತ್ತಿದೆ' ಎನ್ನುತ್ತಿದ್ದಾಳೆ. ಏನು ಮಾಡಲಿ?*

ಅರ್ಥ ಮಾಡಿಕೊಳ್ಳಿ; 'ನಿಮ್ಮ ಮೇಲೆ' ಹರಿದ ಪ್ರೀತಿ ಮುಂದೆ ಹೋಗುತ್ತಿದೆ. ನೀವು ಬಂಡೆ, ಪ್ರಿಯಕರ ದಂಡೆ! ನೋಡುತ್ತಾ ಕೂಡಿ ಅಷ್ಟೆ!

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ದೀಪ ಉರಿಯುವುದಕ್ಕೂ, ಹೊಟ್ಟೆ ಉರಿಯುವುದಕ್ಕೂ ಏನು ವ್ಯತ್ಯಾಸ?*

ಎಣ್ಣೆಯೊಡನೆ ಬತ್ತಿ ಸೇರಿಸಿದರೆ ದೀಪದ ಉರಿ; ಎಣ್ಣೆ (ಹೆಂಡ)ಯೊಡನೆ ಬಜ್ಜಿ ಸೇವಿಸಿದರೆ ಹೊಟ್ಟೆ ಉರಿ.

ಡೈರಿ ವಿಶ್ವನಾಥ್, ಬೆಂಗಳೂರು

*ಭಾವನೆ ಅವಶ್ಯವೆ?*

ಹಾಗೇನಿಲ್ಲ. ಸಂಭಾವನೆ ಇದ್ದರೂ ಆದೀತು.

ರಮೇಶ್, ಹನುಮನಾಳು

*ಊಟ ಸಪ್ಪೆ ಆದರೆ ಉಪ್ಪು ಹಾಕಿಕೊಳ್ಳುತ್ತೇವೆ. ಉಪ್ಪೇ ಸಪ್ಪೆಯಾದರೆ?*

ಅದ್ಯಾವುದೋ ಟೂತ್‌ಪೇಸ್ಟ್‌ನಲ್ಲಿ ಉಪ್ಪು ಇದೆಯಂತೆ. ಆ ಪೇಸ್ಟನ್ನು ಉಪ್ಪಿಗೆ ಸವರಿಕೊಂಡರೆ ರುಚಿ ವಾಪಸ್!

ಜಾಕೋಬ್ ಡಿಸೋಜ, ಕುರುವಳ್ಳಿ

*ಬಿದ್ದವನ ಮೇಲೊಂದು ಕಲ್ಲು ಹಾಕುವವರಿಗೆ ನೀವೇನಂತೀರಿ?*



ಗೋರಿಯ ಮೇಲುಕಲ್ಲಿನ ಕಂಟ್ರಾಕ್ಟರ್.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ಹೆಂಗಸನ್ನು ಗೃಹಮಂತ್ರಿ ಎಂದು ಕರೆಯಲು ಕಾರಣವೇನು?*

ಮಕ್ಕಳ ಭಯೋತ್ಪಾದನೆ, ಪತಿಯ ಆಂತರಿಕ ಕಲಹ, ನೆರೆಯವರ ಗಡಿವಿವಾದ ಎಲ್ಲವನ್ನೂ ನಿಭಾಯಿಸುವುದರಿಂದ.

ಆರ್. ಮಧುಸೂದನ್, ಹಾಸನ

*ನನ್ನ ಜಾತಕ ನೋಡಿದ ಜ್ಯೋತಿಷಿಯೊಬ್ಬರು ಆನೆ ದಾನ ಕೊಡಿ, ಒಳ್ಳೆ ಹೆಂಡತಿ ಸಿಗುತ್ತಾಳೆ ಎನ್ನುತ್ತಿದ್ದಾರಲ್ಲ?*

ಒಪ್ಪಬೇಡಿ. ಅದು ಆನೆಗೆ ಬದಲಾಗಿ ಅದೇ ಅಳತೆಯವಳನ್ನು ಕೊಡುವ ಎಕ್ಸ್‌ಚೇಂಜ್ ಆಫರ್.

■ ರಾಮ್